## ನನ್ನ ಓದು

ಅಲ್ಲಮ ಕನ್ನಡದ ಮನಸ್ಸಿನಲ್ಲಿ ಹುಟ್ಟಿಸಿರುವಷ್ಟು ಬೆರಗು ಹಾಗೂ ಸಂಕೀರ್ಣತೆಯನ್ನು ಮತ್ತಾವ ವ್ಯಕ್ತಿತ್ವವೂ ಹುಟ್ಟಿಸಿಲ್ಲವೇನೋ. ಬೆಡಗಿನ ವಚನಗಳ ಅರ್ಥ ಸಾಂದ್ರತೆ, ಭಾಷೆಯನ್ನು ಮುರಿದು ಕಟ್ಟಿರುವ ಪರಿ, ಶೈಲಿಯ ವೈಚಿತ್ರ್ಯ ಎಲ್ಲವೂ ಸೇರಿ ಅಲ್ಲಮನನ್ನು ತಿಳಿದೆನೆಂದರೂ ತಿಳಿದ ಧೀರನಿಲ್ಲ ಎನ್ನುವ ವಾತಾವರಣವನ್ನು ಸೃಷ್ಟಿಸಿವೆ. ಡಿ.ಆರ್. ನಾಗರಾಜ್ ಅವರ 'ಅಲ್ಲಮ ಮತ್ತು ಶೈವ ಪ್ರತಿಭೆ' ಇದನ್ನು ಡಾ. ಗುಂಡೂರ್ ಅವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಈ ಅನುಭವವನ್ನು ಕುರಿತಂತೆ ಅವರು ಅಲ್ಲಮನಷ್ಟೇ ಡಿ.ಆರ್. ಅವರ ಕೃತಿಯೂ ಬೆಡಗಿನದ್ದೇ ಆಗಿದೆ ಎಂದು ಉದ್ಗರಿಸಿದ್ದು ನೆನಪಾಗುತ್ತಿದೆ. ಅಲ್ಲಮನನ್ನು ಭಾರತದ ವ್ಯಾಪ್ತಿಯಲ್ಲಿ ಗುರುತಿಸುವ ಮಹತ್ವಾಕಾಂಕ್ಷೆಯ ಈ ಕೃತಿ ಅಲ್ಲಮನನ್ನು ಅನಾವರಣ ಮಾಡಲು ಯತ್ನಿಸುತ್ತದೆ. ಅವನ ವಿಚಾರಗಳು ಮತ್ತು ವ್ಯಕ್ತಿತ್ವ ಭಾರತವನ್ನು ಹಬ್ಬುವ ವಿಸ್ತಾರದವು ಮತ್ತು ಮಹತ್ವದವಾಗಿದ್ದವು. ಶೈವ ಪರಂಪರೆಗೇ ಹೊಸದೊಂದು ಆಯಾಮವನ್ನು, ಅದು ವೈದಿಕರ ಜನವಿರೋಧಿ, ಪಟ್ಟಭದ್ರ, ಶೋಷಕ ಆಯಾಮಕ್ಕೆ ಪರ್ಯಾಯವಾಗಿ ಜನಮುಖಿಯಾದ ಆಕೃತಿಯನ್ನು ವೈಚಾರಿಕ, ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಕಟ್ಟುವ ಆಶಯದವಾಗಿದ್ದವು ಎನ್ನುವುದನ್ನು ಈ ಕೃತಿ ಬುನಾದಿಯಾಗಿ ಇಟ್ಟುಕೊಂಡಿದೆ. ಈ ಆಶಯದ ಕಾರಣಕ್ಕೇ ಅಲ್ಲಮನಾಗಲೀ, ಶರಣ ಚಳವಳಿಯಾಗಲೀ ಬಹುಬೇಗ ಇತರ ಭಾಷಿಕರ ನಡುವೆಯೂ ಜಾಗ ಪಡೆದುಕೊಂಡವು ಎನ್ನುವ ಇವರ ನಿಲುವನ್ನು ಕನ್ನಡದ ಕೆಲವು ವಿದ್ವಾಂಸರು (ಉದಾ: ಎಲ್. ಬಸವರಾಜು) ಒಪ್ಪಲಿಲ್ಲ. 'ಇದೊಂದು ಹೈಪೋಥೀಸಿಸ್', 'ದೂರಾನ್ವಯದ ಮಾತು' ಮೊದಲಾಗಿ ಹೇಳಲಾಯಿತು. ಇದಕ್ಕೆ ಮುಖ್ಯ ಕಾರಣ, ಅನುಭಾವದ ಭಾರತೀಯ ನಕಾಶೆಯನ್ನು ಕುರಿತ ಅಪನಂಬಿಕೆ ಎಂದು ಆ ವಿದ್ವಾಂಸರ ಮೇಲಿನ ಗೌರವದಿಂದ ನೆಪ ಕೊಟ್ಟುಕೊಳ್ಳಬಹುದಷ್ಟೇ.

ಸುಮಂಗಲಾ ಮುಮ್ಮಿಗಟ್ಟಿ ಶುದ್ಧಾಂಗವಾಗಿ ವಿಜ್ಞಾನದ ವಿದ್ಯಾರ್ಥಿನಿ. ಕಾರ್ಯ ಕಾರಣ ಸಂಬಂಧಗಳಿಂದಲೇ ಎಲ್ಲವನ್ನೂ ನೋಡುವ, ಒಪ್ಪುವ ಮನಸ್ಥಿತಿಯ ಇವರು ಅಲ್ಲಮನನ್ನು ಆರಿಸಿಕೊಂಡದ್ದು ಸಹಜವಾಗಿಯೇ ಇದೆ. ಲೋಕಸಮಸ್ತವನ್ನೂ ಒಳಗಣ್ಣಿನಿಂದಲೇ ನೋಡುವ ದಾರಿಯನ್ನು ಆರಿಸಿಕೊಂಡ ವ್ಯಕ್ತಿ ಅಲ್ಲಮ.

ಕಾಣುತ್ತಿರುವುದರಾಚೆಗೂ ಇನ್ನೇನೋ ಇದೆ, ಅದು ಸುಲಭಕ್ಕೆ ನಿಲುಕುವುದಿಲ್ಲ, ಅದನ್ನು ಎಟುಕಿಸಿಕೊಳ್ಳಬೇಕು ಎಂದು ಚಡಪಡಿಸಿದ ವ್ಯಕ್ತಿತ್ವ ಅಲ್ಲಮನದು. ವಿಜ್ಞಾನದ ಹಾದಿಯಾದರೂ ಇದೇ. ಆದರೆ ಅಲ್ಲಮ ಒಬ್ಬ ಅಪ್ಪಟ ಕವಿಯೂ ಹೌದು. ಲೋಕವನ್ನು ತನ್ನ ಕಲ್ಪನಾವಿಲಾಸದ ಭಾಷೆಯ ತೆಕ್ಕೆಗೊಗ್ಗಿಸುವ ಪ್ರಯತ್ನವನ್ನೂ ಅಲ್ಲಮನ ವಚನಗಳುದ್ದಕ್ಕೂ ನಾವು ಕಾಣಬಹುದು. ಪ್ರಖರ ಬೌದ್ಧಿಕತೆ ಮತ್ತು ಅಸೀಮ ಕಲ್ಪನಾಶೀಲತೆಯಿಂದಾಗಿ ಅಲ್ಲಮ ಸದಾ ಮಿಕ್ಕು ಮೀರುಹೋಗುತ್ತಿರುವವನಂತೆ ಭಾಸವಾಗುತ್ತಾನೆ.

ಇಂಥ ಅಲ್ಲಮನನ್ನು ಸುಮಂಗಲಾ ಹನ್ನೆರಡನೆಯ ಶತಮಾನದ ಮಹಾಪಥಿಕನಂತೆ ಚಿತ್ರಿಸಲು ಇಲ್ಲಿ ಹವಣಿಸಿದ್ದಾರೆ. ಇದಕ್ಕೆ ಮೂಲಾಧಾರವಾಗಿ ಅವರು ವಚನಗಳನ್ನೇ ಇಟ್ಟುಕೊಂಡಿದ್ದಾರೆ. ಅಲ್ಲಮನ, ಬಸವಣ್ಣನ, ಸಿದ್ಧರಾಮನ, ಅಕ್ಕನ... ಹೀಗೆ ಎಲ್ಲರ ವಚನಗಳನ್ನು ಜೊತೆಗೆ ಇತಿಹಾಸದ ದಾಖಲೆಗಳನ್ನು, ಶೂನ್ಯ ಸಂಪಾದನೆಯ ಪಠ್ಯಗಳನ್ನು, ವಿದ್ವಾಂಸರ ಬರವಣಿಗೆಗಳನ್ನು... ಹೀಗೆ ಲಭ್ಯವಿರುವ ಎಲ್ಲ ಮಾಹಿತಿಗಳನ್ನೂ ಇವರು ಆದ್ಯಂತವಾಗಿ ಅಭ್ಯಾಸ ಮಾಡಿದ್ದಾರೆ. ಹೀಗಾಗಿ ಕೃತಿಯನ್ನು ವಾಸ್ತವಾಂಶಗಳ ಮೇಲೆಯೇ ಕಟ್ಟುವ ಪ್ರಯತ್ನವು ಇಲ್ಲಿದೆ. ಕೃತಿಯ ಬಲವಾದ ನೆಲೆ ಎಂದರೆ, ಅಲ್ಲಮನನ್ನು ಆತನ ವ್ಯಕ್ತಿತ್ವದ ವಿಲಕ್ಷಣ ಗುಣಗಳ ಜೊತೆಗೇ ಶರಣ ಚಳವಳಿಯ ಸಾಮೂಹಿಕ ನಾಯಕತ್ವದ ಒಬ್ಬ ಪ್ರಭಾವಶಾಲಿ ವ್ಯಕ್ತಿತ್ವ ಎನ್ನುವಂತೆ ಚಿತ್ರಿಸಿರುವುದರಲ್ಲಿ. ಆತನನ್ನು ಲೋಕೋತ್ತರ ಎನ್ನುವಂತೆ ಬಣ್ಣಿಸುವ ಆಮಿಷಗಳನ್ನು ಆದಷ್ಟು ನೀಗಿಕೊಂಡೇ ಬರೆಯುವಲ್ಲಿ ಇವರು ಬಹುತೇಕ ಯಶಸ್ವಿಯಾಗಿದ್ದಾರೆ. ಅಲ್ಲಮನನ್ನು 'ಇವನಾರವ' ಎನ್ನುವ ಬೆರಗಿಗಿಂತ 'ಇವ ನಮ್ಮವ' ಎನ್ನುವ ಮಾನವನೆಲೆಯಲ್ಲಿ ಇರಿಸಲು ನಡೆಸಿರುವ ಕ್ರಮ ಯಾರ ಅರಿವಿಗಾದರೂ ಬರುತ್ತದೆ. ಇದಕ್ಕಿಂತ ಮುಖ್ಯವಾದ ಸಂಗತಿಯೆಂದರೆ, 'ಅಲ್ಲಮನಾದ' ಪರಿಯನ್ನು ಅರಿಯುವಲ್ಲಿ ಇವರು ಉದ್ದಕ್ಕೂ ಉಳಿಸಿಕೊಂಡಿರುವ ಆಸಕ್ತಿ.